## ಸೂಕ್ತಿಪ್ರಭ

### ತಿರುಕ್ಕುರಳ್

☛ ಉಲ್ಲಾಸಪೂರ್ಣವೂ ಪರಿಶುದ್ಧವೂ ಆದ ಹೃದಯದಿಂದ ಹೊರಹೊಮ್ಮುವ ಸವಿಮಾತೇ ನಿಜವಾದ ಗುಣ.

☛ ಅಗತ್ಯ ಇರುವಾಗ ನೀಡಿದ ಸಹಾಯ ಚಿಕ್ಕದೇ ಆದರೂ ಜಗತ್ತಿಗಿಂತಲೂ ದೊಡ್ಡದು.

☛ ಇನ್ನಾವುದನ್ನೂ ತಡೆಹಿಡಿಯದಿದ್ದರೂ ಪರವಾಗಿಲ್ಲ, ನಿನ್ನ ನಾಲಿಗೆಯನ್ನು ತಡೆಹಿಡಿ; ನಾಲಿಗೆ ಹತೋಟಿ ಇಲ್ಲದವರ ಮಾತು ಕೆಡುತ್ತದೆ; ಅವರೂ ತೊಂದರೆ ಪಡುತ್ತಾರೆ.

☛ ಮಾಡಬಾರದ್ದನ್ನು ಮಾಡಿದವ ನಾಶವಾಗುತ್ತಾನೆ; ಮಾಡಬೇಕಾದ್ದನ್ನು ಮಾಡದವನೂ ನಾಶವಾಗುತ್ತಾನೆ.

☛ ಮನುಷ್ಯ ಕಲಿಯಬೇಕಾದ್ದನ್ನೆಲ್ಲ ಕಲಿಯಲಿ, ಅವನ ನಡತೆ ಅವನ ಜ್ಞಾನಕ್ಕೆ ತಕ್ಕುದಾಗಿರಲಿ.

☛ ನಸುನಗೆಯ ಮುಖ, ಉದಾರತೆ, ಸವಿಮಾತು ಮತ್ತು ದೂಷಿಸದ ಸ್ವಭಾವ—ಇವು ನಿಜಕ್ಕೂ ಕುಲೀನರ ಗುಣಗಳು.

☛ ಚಿಂತನಪರ ಮನಸ್ಸಿಟ್ಟು ಎಚ್ಚರಿಕೆಯಿಂದ ಕೆಲಸದಲ್ಲಿ ತೊಡಗಿದರೆ ಸಾಧಿಸಲು ಬಹು ಕಷ್ಟವೆಂಬುದು ಯಾವುದೂ ಇಲ್ಲ.

☛ ಇನ್ನು ಮುಂದೆ ಒಳ್ಳೆಯವನಾಗುತ್ತೇನೆ ಎನ್ನಬೇಡ; ಈಗಲೇ ಆಗು. ನಾವು ಗಳಿಸುವ ಗುಣಗಳಿಗೆ ಸಾವಿಲ್ಲ. ಅವುಗಳಿಂದ ಮಾತ್ರ ನಮ್ಮ ದೇಹಕ್ಕೆ ಸಾವು ಬಂದಾಗ ಸಹಾಯವಾಗುತ್ತದೆ.

☛ ಆಲಸ್ಯ, ಮರೆವು, ಸೋಮಾರಿತನ ಮತ್ತು ನಿದ್ದೆ - ಇವು ವಿನಾಶದತ್ತ ಸಾಗುವವರಿಗೆ ಅಂಟಿಕೊಂಡ ಅಲಂಕಾರಗಳು.

☛ ವಿನಾಶವನ್ನು ನಿವಾರಿಸುವ ಆಯುಧ ವಿವೇಕ; ಶತ್ರುಗಳು ನಾಶಮಾಡಲಾರದ ಒಳಕೋಟೆ ಅದು. ವಿವೇಕವಿದ್ದರೆ ಎಲ್ಲವೂ ಇದ್ದಂತೆ; ವಿವೇಕವಿಲ್ಲದಿದ್ದರೆ, ಬೇರೆ ಏನೆಲ್ಲ ಇದ್ದರೂ, ಏನೂ ಇಲ್ಲದಂತೆಯೇ.

☛ ನಿಮ್ಮ ವಿದ್ವತ್ತಿನ ಬಗ್ಗೆ ಮಾತಾಡಿ ಪಂಡಿತರನ್ನು ಮೆಚ್ಚಿಸಿ. ನಿಮಗಿಂತ ಹೆಚ್ಚು ತಿಳಿದವರಿಂದ ನೀವು ಇನ್ನಷ್ಟು ಕಲಿಯಿರಿ.

☛ಖ್ಯಾತಿ ಮತ್ತು ಒಳ್ಳೆಯದನ್ನು ಬಯಸುವಾತನಿಗೆ ವಿನಯವಿರಬೇಕು. ಶ್ರೇಷ್ಠತೆ ಬಯಸುವಾಗ ನಮ್ರನಾಗಿರಬೇಕು.

☛ಕೆಲಸವನ್ನು ಹೀಗೆ ಮಾಡಬೇಕು ಎಂದು ಹೇಳುವುದು ಯಾರಿಗಾದರೂ ಸುಲಭ; ಆದರೆ ಹೇಳಿದಂತೆ ಮಾಡುವುದು ಹಾಗೂ ತಾನೂ ನಡೆದುಕೊಳ್ಳುವುದು ಬಹಳ ಕಷ್ಟ.

## ಪ್ರಾರ್ಥನೆ

### ಭುವನೇಶರುಂಟೆ ನಿನ್ನಂತೆ!

(ರತ್ನಾಕರ ವರ್ಣಿ ಬರೆದ "ಭರತೇಶ ವೈಭವ" ದಲ್ಲಿ ಬರುವ ಬಾಹುಬಲಿಯ ಸ್ತುತಿ)

ಗದ್ದುಗೆಯೇರಿ ದುಷ್ಕಥೆಗೇಳಿ ಹಲಬರು
ಬಿದ್ದುಹೋಗುವರಧೋಗತಿಗೆ
ಗದ್ದುಗೆಯೇರಿ ಸತ್ಕಥೆಗೇಳಿ ಮುಕ್ತಿಯ
ಹೊದ್ದುವರಾರು ನಿನ್ನಂತೆ ॥ ೧ ॥

ಒಳಗಿದ್ದ ದೇವನ ಕಾಣದೆ ಹೊರಗೆ ದೇ-
ಗುಲವ ಪೂಜಿಸುವೆಗ್ಗನಂತೆ
ಒಳಗಣಾತ್ಮನ ಬಿಟ್ಟು ಮೈಯನೆ ತಾನೆಂದು
ಸಲೆ ಹೊಗಳಿಸಿಕೊಳ್ಳುತಿಹರು ॥ ೨ ॥

ಭೋಗವಿಲ್ಲದೆ ಭೋಗಿಯಹುದು ನಿನ್ನೊಳಗಾತ್ಮ
ಯೋಗವಿಲ್ಲದೆ ಯೋಗಿಯಹುದು
ಭೋಗದೊಳಿದ್ದು ಯೋಗವ ಮಾಡಿ ಭವಮುಕ್ತ
ರಾಗುವರಾರು ನಿನ್ನಂತೆ ॥ ೩ ॥

ಜ್ಞಾನಿಯ ಮುಟ್ಟಲಮ್ಮದು ಕರ್ಮವೆನ್ನಲಾ
ಜ್ಞಾನ ತಾನಾವುದೆಂದೆನಲು
ಜ್ಞಾನವೆ ನಾನು ಶರೀರ ನಾನಲ್ಲೆಂಬ
ಮಾನಸದನುಭವದಲ್ತೆ ॥ ೪ ॥

ಹೊರಗೆಲ್ಲವ ತೊರೆದೊಳಗೆ ನಿರ್ಮಲವಾಗಿ
ಮೆರೆವವರುಂಟು ಲೋಕದೊಳು
ಹೊರಗೆಲ್ಲವಿದ್ದೊಳಗೇನುವಿಲ್ಲೆನೆ ಬಚ್ಚ
ಬರಿದಾದರಾರು ನಿನ್ನಂತೆ ॥ ೫ ॥

ಇವನವನನ್ನ ಗೆಲ್ವರಾವುದುಪಾಯವೆಂ
ದವನಿಯೊಳೆಣಿಸುವರುಂಟು
ಜವನ ಜಯಿಸುವರುಪಾಯವೇನೆಂದೆಂಬ
ಭುವನೇಶರುಂಟೆ ನಿನ್ನಂತೆ ॥ ೬ ॥